ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 1

(ದಿನಾಂಕ 03-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-

ಸರ್ವೆ ಮಾಡಿದ ದಿನದಂದು ಗ್ರಾಮಸ್ಥರಾದ ಹೆಚ್ ಗುರುಬಸವರಾಜ, ಕೆ ವೀರಭದ್ರಪ್ಪ ಇದ್ದರು. ಸದರಿಯವರು ಹೇಳಿಕೆಗೆ ಆ ದಿನ ಸಹಿ ಮಾಡಿರುವುದಿಲ್ಲ. ಅಳತೆ ಮಾಡುವ ಸಮಯದಲ್ಲಿ ಅಖಂಡಿ ಈರಮ್ಮರವರು ಹಾಜರಿರಲಿಲ್ಲ ಅವರ ಹಿರಿಯ ಮಗ ಬಸವರಾಜ ಹಾಜರಿದ್ದ. ನಿಪಿ-4 ರಿಂದ 7 ರ ಕಾಲಂ ನಂ.13 ರಲ್ಲಿ ನೀರಾವರಿ ಮೂಲ ಬಾವಿ ಅಂತಾ ನಮೂದು ಇದೆ ಎಂದರೆ ಸರಿ. ಆ ದಿನ ಸರ್ವೆಯವರು ನಮ್ಮ ಜಮೀನು ಕಡಿಮೆ ಇದೆ ಅಂತಾ ತಿಳಿಸಿರುತ್ತಾರೆ. ನಿಪಿ-10 ರಲ್ಲಿ ಜಮೀನು ಒತ್ತುವರಿಯಾಗಿದೆ ಅಂತಾ ಸರ್ವೆ ಇಲಾಖೆಯವರು ನಮೂದಿಸಿಲ್ಲವೆಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲವೆನ್ನುತ್ತಾರೆ. ನಿಪಿ-10 ರಲ್ಲಿ ಕೊಳವೆ ಬಾವಿ ಇದೆ ಆ ಕಾರಣದಿಂದಾಗಿ ಅಳತೆ ಮಾಡಲು ಬರುವುದಿಲ್ಲ ಅಂತಾ ಬರೆದಿದ್ದು ಇದೆ ಎಂದರೆ ಸರಿಯಲ್ಲ.

ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಮತ್ತು ಪ್ರತಿವಾದಿಯ ಜಮೀನಿನ ಪಶ್ಚಿಮಕ್ಕೆ ಒಂದು ಒಡ್ಡು ಇದೆ ಎಂದರೆ ಸರಿ. ಸದರಿ ಒಡ್ಡು ಹಳೆಯ ಕಾಲದ್ದು ಎಂದರೆ ಸರಿ. ಸದರಿ ಒಡ್ಡಿನ ಮೇಲೆ ಸುಮಾರು 50-60 ವರ್ಷ ವಯಸ್ಸಿನ ಗಿಡಮರಗಳು ಇವೆ ಎಂದರೆ ಸರಿ. ನಾನು ತೆರಿಗೆ ಪಾವತಿಸಿರುವ ಬಗ್ಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದಿಯರು ನಾನು ಹೇಳುವ ಹಾಗೆ ನನ್ನ ಜಮೀನನ್ನು ಯಾವುದೇ ರೀತಿಯಿಂದ ಒತ್ತುವರಿ ಮಾಡಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಒತ್ತುವರಿ ಕುರಿತು ಪಂಚಾಯ್ತಿ ಮಾಡಿದ ದಿನಾಂಕ ನನಗೆ ನೆನಪಿಲ್ಲ. ಪಂಚಾಯ್ತಿಗೆ ಹಾಜರಿದ್ದ ಹಿರಿಯರು ಕೊಟ್ರಯ್ಯ, ಬಡಿಗೇರ ವಿರುಪಣ್ಣ, ಎಳೇದ ಮೀಸಪ್ಪ, ಎಳೇದ ಹನುಮಂತಪ್ಪ, ಕಜ್ಜಿ ಕಲಿವೀರಪ್ಪ ಮತ್ತು ಹೆಚ್ ಗುರುಬಸವರಾಜ ಇರುತ್ತಾರೆ. ಸದರಿಯವರನ್ನು ನಾನು ಸದರಿ ದಾವೆಯಲ್ಲಿ ನನ್ನ ಪರ ಸಾಕ್ಷಿದಾರರನ್ನಾಗಿ ಮಾಡಿಲ್ಲ. ಆ ರೀತಿ ಯಾವುದೇ ಪಂಚಾಯ್ತಿಯಾಗಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾಸ್ತಿಯ ದಕ್ಷಿಣಕ್ಕೆ ಹನುಮಂತಪ್ಪ, ಬಸಪ್ಪ ಮತ್ತು ಪಂಪಾಪತಿ ಇವರ ಜಮೀನು ಇದೆ ಎಂದರೆ ಸರಿ. ಸದರಿಯವರ ಜಮೀನಿನ ಸರ್ವೆ ನಂಬರ್ ನನಗೆ ನೆನಪಿಲ್ಲ. ಸರ್ವೆ ಕಾಲದಲ್ಲಿ ಈಶಪ್ಪ ಮತ್ತು ಎಳೇದ ಹನುಮಂತಪ್ಪ ಹಾಜರಿದ್ದರು. ಸದರಿಯವರು ಸರ್ಕಾರಕ್ಕೆ ಕೊಟ್ಟ ಹೇಳಿಕೆಗೆ ಸಹಿ ಮಾಡಿಲ್ಲ. ಆ ದಿನ ಅವರು ಸರ್ವೆ ಕಾಲಕ್ಕೆ ಹಾಜರಿರಲ್ಲಿ ಆ ಕಾರಣದಿಂದ ಅವರು ಸಹಿ ಮಾಡಿಲ್ಲವೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 1

ಪ್ರತಿವಾದಿಯರ ಅಜ್ಜನ ಹೆಸರು ಕೆಂಚಪ್ಪ ಮತ್ತು ಕಳಸ್ಸನವರ ನಿಂಗಪ್ಪ ಎಂದರೆ ಸರಿ. ಸದರಿಯವರು ಭೀಮಮ್ಮ ಇವರಿಂದ ಜಮೀನನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿಯವರಿಂದ ಅವರು ದಿಃ26-11-1946 ರಂದು ರೂ.200/- ಗಳಿಗೆ ಖರೀದಿ ಮಾಡಿರುತ್ತಾರೆ ಈ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಅವರು ಸರ್ವೆ ನಂ.219/ಎಫ್ ರಲ್ಲಿ 26 ಎಕರೆ 6 ಸೆಂಟ್ಸ ಜಮೀನಿನ ಪೈಕಿ 10 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಂತೆ ನಿಂಗಪ್ಪ ಮತ್ತು ಕೆಂಚಪ್ಪ ಇವರ ಹೆಸರು ಪಹಣಿಯಲ್ಲಿ ದಾಖಲಾಯಿತು ಎಂದರೆ ಸರಿ. ಸದರಿಯವರು ತಮ್ಮ ಜೀವಿತಕಾಲದಲ್ಲಿ 10 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಕೆಂಚಪ್ಪ ಮತ್ತು ನಿಂಗಪ್ಪ ಇವರ ಮರಣದ ನಂತರ ಪ್ರತಿವಾದಿಯ ತಾಯಿ ಗಂಗಮ್ಮ ಇವರ ಹೆಸರಿಗೆ ಪೌತಿ ವಾರಸು ಖಾತೆ ಬದಲಾವಣೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ಕೈಬರಹ ಪಹಣಿಯಿಂದ ಕಂಪ್ಯೂಟರ್ ಪಹಣಿಗೆ ಬದಲಾವಣೆ ಮಾಡುವ ಸಮಯದಲ್ಲಿ ಪ್ರತಿವಾದಿಯು 10 ಎಕರೆ ಜಮೀನು ಸ್ವಾಧೀನದಲ್ಲಿದ್ದರೂ 8 ಎಕರೆ 6 ಸೆಂಟ್ಸ ಅಂತಾ ತಪ್ಪು ನಮೂದಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಪೂರ್ವಜರಿಂದಲೂ 10 ಎಕರೆ ಜಮೀನಿನ ಸ್ವಾಧೀನದಲ್ಲಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯು ತನ್ನ ಜಮೀನಿನ ಮೇಲೆ ಸಹಕಾರ ಸಂಘ ಹೆಚ್ ಬಿ ಹಳ್ಳಿಯಲ್ಲಿ ರೂ.95 ಸಾವಿರಗಳ ಸಾಲವನ್ನು ಸನ್ 2004-05 ರಲ್ಲಿ ಪಡೆದಿರುತ್ತಾರೆಂದರೆ ಸರಿ. ಸದರಿ ಗಂಗಮ್ಮ ಇವರು ಖರೀದಿಪತ್ರ ಮತ್ತು ಇ ಸಿ ಯಂತೆ 10 ಎಕರೆ ಜಮೀನಿಗೆ ತನ್ನ ಹೆಸರನ್ನು ದಾಖಲುಪಡಿಸಿಕೊಡಿ ಅಂತಾ ತಹಶೀಲ್ದಾರ್ ಹೆಚ್ ಬಿ ಹಳ್ಳಿ ಇವರಿಗೆ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ತಹಶೀಲ್ದಾರ್ ಇವರು ಗಂಗಮ್ಮ ಇವರ ಅರ್ಜಿಯನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರದ ಮುಂದೆ ಪರಿಹಾರ ಕಂಡುಕೊಳ್ಳಿ ಅಂತಾ ದಿಃ 05-06-2017 ರಂದು ಹಿಂಬರಹ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ಹಿಂಬರಹದ ಆಧಾರದ ಮೇಲೆ ಪ್ರತಿವಾದಿಯು ಮಾನ್ಯ ಎ ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ನಂ.173/2023-24 ನೇದ್ದನ್ನು ದಾಖಲಿಸಿದ್ದು ಅದರಲ್ಲಿ ನನಗೆ ನೋಟೀಸು ಸಹಾ ಬಂದಿರುತ್ತದೆಂದರೆ ಸರಿ. ಪ್ರತಿವಾದಿಯರು 10 ಎಕರೆ ಜಮೀನಿಗೆ ಮಾಲೀಕರು ಅಂತಾ ಕ್ರಯಪತ್ರ, ಇ ಸಿ ಮತ್ತು ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಮೂಲ ದಾವಾ ಸಂಖ್ಯೆ. 111/2023 ಪಿ ಡಬ್ಲ್ಯೂ 1

ಸುಳ್ಳು ದಾವೆಯ ಕಾರಣದ ಮೇಲೆ ನಾನು ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯು ಯಾವುದೇ ಜಮೀನನ್ನು ಒತ್ತುವ ಮಾಡದೇ ಇದ್ದರೂ ಸಹಾ ಅವನ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಸರ್ವೆ ನಂ.219/ಎಫ್ ಒಟ್ಟು 26 ಎಕರೆ 06 ಸೆಂಟ್ಸ ಜಮೀನಿನಲ್ಲಿಯ ಎಲ್ಲಾ ಜಂಟಿ ಸ್ವಾಧೀನದಾರರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡದೇ ಪ್ರತಿವಾದಿಯ ಮೇಲೆ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯು ಜಮೀನು ಒತ್ತುವರಿ ಮಾಡಿರುತ್ತಾನೆನ್ನುವ ಬಗ್ಗೆ ಯಾವುದೇ ದಾಖಲಾತಿಗಳಲ್ಲಿ ತೋರಿಸದೇ ಇದ್ದರೂ ಸಹಾ ಅವನ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ